ದೆಂದು ಅಂದಾಜು ಮಾಡಲಾಯಿತು. ಇದರಿಂದ ವರಾಹಿ ಯೋಜನೆಯಲ್ಲಿ ೧೫-೨೦ ಮೆಗಾವಾಟ್ ವಿದ್ಯುಚ್ಛಕ್ತಿ ಉತ್ಪತ್ತಿ ಮಾಡಬಹುದೆಂದು ಪರಿಶೀಲಿಸಲಾಗಿದೆ.

ಶ್ರೀ ಆನಂದಕುಂದ ಹೆಗಡೆ.—ಟೆಂಡರ್‌ಗೆ ಇಡಲಿಲ್ಲವೆ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಟೆಂಡರ್ ನೋಟಿಫಿಕೇಷನ್ ಪ್ರಕಟಿಸಲಾಗಿತ್ತು. ಆಕ್ಸೆಪ್ಟ್ ಮಾಡಿಲ್ಲ ಕ್ಯಾನಲ್ ಮಾಡಿದ್ದೇವೆ.

ಶ್ರೀ ಆನಂದಕುಂದ ಹೆಗಡೆ.—ಆದಷ್ಟು ಬೇಗ ನಿರ್ಣಯ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ.ಬಿ. ಚಿಮ್ಮನ ಕಟ್ಟಿ.—ಆದಷ್ಟು ಬೇಗ ನಿರ್ಣಯ ತೆಗೆದುಕೊಳ್ಳುತ್ತೇವೆ.

Water Supply Facilities for Villages in Mudigere Taluk

228 SMT. MOTAMMA (Mudigere).—Will the Minister for Rural Development and Panchayat Raj be pleased to state :—

(a) whether drinking water supply has been provided to all the villages in Mudigere taluk;

(b) if so, the number of borewells and the water supply arrangements provided under National Rural Water Supply Scheme since two years and whether all those have been completed;

(c) the number of villages and Harijan colonies facing scarcity of drinking water supply where borewells and wells were failed and for non-supply of water under the National Rural Water Supply Scheme in this taluk;

(d) the steps taken by Government in such places ?

SRI B. RAMAIAH (Minister for Rural Development and Pachayat Raj).—

(a) There are 219 villages and Harijan colonies in Mudigere Taluk. Out of them, borewells have been installed in 160 villages and Harijan colonies and out of them, 98 borewells were successful. Out of the successful borewells, 40 borewells have been provided with hand pumps and for the remaining, arrangements are under progress to instal hand-pumps.

(b) Drinking water supply has been provided through 40 borewells and 2 National Rural Water Supply Schemes during the last two years.

(c) There are 92 such villages.

(d) Steps were taken to provide water supply through open wells in the villages where borewells were failed and in villages where population is 1000 and above water supply was made through combined water supply schemes.

ಶ್ರೀಮತಿ ಪೋಟಮ್ಮ.—ಮೂಡಿಗೆರೆ ತಾಲ್ಲೂಕಿನ ೧೬೦ ಗ್ರಾಮಗಳಲ್ಲಿ ಕೊಳವೆ ಬಾವಿಗಳನ್ನು ತೋಡಿದ್ದು ಅದರಲ್ಲಿ ೯೮ ಯಶಸ್ವಿಯಾಗಿದ್ದು ಕೇವಲ ೪೦ ಕೊಳವೆ ಬಾವಿಗಳಿಗೆ ಪೈಪುಗಳನ್ನು ಅಳವಡಿಸಲಾಗಿದೆ, ಉಳಿದವುಗಳಿಗೆ ಅಳವಡಿಸಲಾಗಿಲ್ಲವೆಂದು ತಿಳಿಸಿದ್ದೀರಿ. ಸ್ವಾಮಿ, ಮಲೆನಾಡಿನಲ್ಲಿ ಯಥೇಚ್ಛವಾಗಿ ಮಳೆ ಬಂದರೂ ಬೇಸಿಗೆ ಕಾಲದಲ್ಲಿ ಬಾವಿಗಳಲ್ಲಿ ನೀರೂ ಇರುವುದಿಲ್ಲ. ಎಲ್ಲ ಒಣಗಿ ಹೋಗಿರುತ್ತದೆ, ಮಾನ್ಯ ಮಂತ್ರಿಗಳೂ ಕೂಡ ಮಲೆನಾಡಿನಿಂದಲೇ ಬಂದಿರುವದರಿಂದ ಅವರಿಗೂ ಕೂಡ ಪರಿಸ್ಥಿತಿ ಗೊತ್ತಿದೆ. ಆದ್ದರಿಂದ ಹೆಚ್ಚಿಗೆ ರಾಷ್ಟ್ರೀಯ ಗ್ರಾಮಾಂತರ ನೀರು ಪೂರೈಕೆ ಯೋಜನೆಯ ಮೇರೆಗೆ ಹೆಚ್ಚು ಹೆಚ್ಚು ಪೈಪುಗಳನ್ನು ಅಳವಡಿಸಿ ಗ್ರಾಮಾಂತರ ಜನರಿಗೆ ಕುಡಿಯುವ ನೀರಿನ ಅನುಕೂಲವನ್ನು ಒದಗಿಸುತ್ತೀರಾ ?

ಶ್ರೀ ಬಿ. ರಾಮಯ್ಯ —ಸನ್ಮಾನ್ಯ ಅಧ್ಯಕ್ಷರೇ. ಈಗಾಗಲೇ ಸುಮಾರು ೪೦ ಕೊಳವೆ ಬಾವಿಗಳಿಗೆ ಹ್ಯಾಂಡ್ ಪಂಪುಗಳನ್ನು ಜೋಡಿಸಿದ್ದೇವೆ. ಇನ್ನು ೫೯ ಕೊಳವೆ ಬಾವಿಗಳಿಗೆ ಕೈ ಪಂಪುಗಳನ್ನು ಅಳವಡಿಸುವ ಕಾರ್ಯ ತೀವ್ರಗತಿಯಿಂದ ನಡೆಯುತ್ತಿದೆ. ರಾಜ್ಯದ ೧೫ ಜಿಲ್ಲೆಗಳಲ್ಲಿ ತೀವ್ರ ಅಭಾವ ಪರಿಸ್ಥಿತಿ ಇದ್ದುದರಿಂದ ಆ ಕಡೆ ಗಮನಹರಿಸಲಾಗಿತ್ತು. ಸದ್ಯದಲ್ಲಿಯೇ ಕೆಲಸವನ್ನು ಮುಗಿಸುತ್ತೇವೆ. ರಾಷ್ಟ್ರೀಯ ನೀರು ಪೂರೈಕೆ ಯೋಜನೆ ಮೇರೆಗೆ ಕಳೆದ ಎರಡು ವರ್ಷದಲ್ಲಿ ಎರಡನ್ನು ಪೂರೈಸಲಾಗಿದೆ. ೪೦ ಕೊಳವೆ ಬಾವಿಗಳನ್ನು ಹಾಕಿದ್ದೇವೆ, ಎಂಟು ರಾಷ್ಟ್ರೀಯ ಗ್ರಾಮಾಂತರ ನೀರು ಪೂರೈಕೆ ಕಾರ್ಯಕ್ರಮಗಳು ವಿವಿಧ ಹಂತದಲ್ಲಿವೆ.

ಶ್ರೀಮತಿ ಪೋಟಮ್ಮ.—ಎರಡು ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಗಳೆಂದು ಹೇಳಿದ್ದೀರಿ, ಯಾವ ಸ್ಥಳದಲ್ಲಿವೆಯೆಂದು ಹೇಳುತ್ತೀರಾ ?

ಶ್ರೀ ಬಿ. ರಾಮಯ್ಯ.—ಹತ್ತಾರಳ್ಳಿಯಲ್ಲಿ ಒಂದು ಇದೆ, ಬಾಕಿ ವಿವರಗಳು ಇಲ್ಲ ಒದಗಿಸಿಕೊಡುತ್ತೇನೆ.

ಶ್ರೀಮತಿ ಪೋಟಮ್ಮ.—ಕುಡಿಯುವ ನೀರಿನ ಸೌಕರ್ಯವಿಲ್ಲದೇ ಇರತಕ್ಕ ಹಳ್ಳಿಗಳು ೯೨ ಇದೆಯೆಂದು ಹೇಳಿದ್ದೀರಿ. ಈ ಹಳ್ಳಿಗಳಲ್ಲಿ ಕೊಳವೆ ಬಾವಿಗಳು, ರಾಷ್ಟ್ರೀಯ ನೀರು ಸರಬರಾಜು ಯೋಜನೆಯು ಯಶಸ್ವಿಯಾಗದೇ ಇರುವುದರಿಂದ, ತೆರೆದ ಬಾವಿಗಳ ಮುಖಾಂತರ ನೀರು ಒದಗಿಸುವುದಕ್ಕೆ ವ್ಯವಸೆ ಮಾಡುತ್ತೇವೆಂದು ಹೇಳಿದ್ದೀರಿ. ಯಾವ ಯಾವ ಹಳ್ಳಿಗಳಲ್ಲಿ ಮಾಡಿದ್ದೀರಿ ಎಂದು ಹೇಳುವುದಕ್ಕೆ ಸಾಧ್ಯವೆ ?

ಶ್ರೀ ಬಿ. ರಾಮಯ್ಯ.—ಮಾನ್ಯ ಅಧ್ಯಕ್ಷರೇ ಬೋರ್‌ವೆಲ್‌ಗಳು, ರಾಷ್ಟ್ರೀಯ ನೀರು ಸರಬರಾಜು ಯೋಜನೆಗಳು ಯಾವ ಯಾವ ಹಳ್ಳಿಗಳಲ್ಲಿ ಯಶಸ್ವಿಯಾಗಿಲ್ಲ ಅಂತ ಹಳ್ಳಿಗಳನ್ನು ಗುರುತಿಸಿ, ತೆರೆದ ಬಾವಿಗಳ ಮುಖಾಂತರ ಕುಡಿಯುವ ನೀರನ್ನು ಕೊಡತಕ್ಕ ವ್ಯವಸ್ಥೆ ಮಾಡುತ್ತೇವೆ.

ಶ್ರೀಮತಿ ಪೋಟಮ್ಮ.—೯೨ ಹಳ್ಳಿಗಳಲ್ಲಿ ಒಂದೆರಡು ಹಳ್ಳಿಗಳಾದರೂ ಹೇಳಬಹುದಲ್ಲ ?

ಶ್ರೀ ಬಿ. ರಾಮಯ್ಯ.—ನಿರ್ದಿಷ್ಟವಾಗಿ ಇಂಥ ಹಳ್ಳಿಗಳು ಎನ್ನುವ ಮಾಹಿತಿ ಇಲ್ಲ. ತಮಗೆ ಬೇಕಾದರೆ ತರಿಸಿಕೊಡುತ್ತೇನೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ವೈಯುಕ್ತಿಕವಾಗಿ ತಮ್ಮ ಮನೆಯಲ್ಲಿ ಏನೋ ಒಂದು ಕೆಲಸ ಇದೆ ಎಂದು ನನಗೆ ಪತ್ರ ಬರೆದು ತಿಳಿಸಿದ್ದಾರೆ. ಆದ್ದರಿಂದ, ತಮ್ಮ ಪ್ರಶ್ನೆಯನ್ನು ಮುಂದಿನ ದಿವಸ ತೆಗೆದುಕೊಳ್ಳುತ್ತೇನೆ.

ಶ್ರೀ ಎ. ರಾಮಚಂದ್ರ.—ಅಧ್ಯಕ್ಷರೆ, ನನ್ನ ಪ್ರಶ್ನೆಯನ್ನು ನಾಳೆ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು.—ಆಗಬಹುದು.

Distribution of Cement in the State

827 SRI KADIDAL DIVAKAR (Thirthahalli).—Will the Chief Minister be pleased to state :—

(b) the quantum of cement required for a month in the State;